ದಿನಾಂಕಃ-27-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ-ಶ್ರೀ **S.K.H.** ಪ್ರತಿವಾದಿ ಪರ ವಕೀಲರಿಂದಃ-

CC 24/2016 ರಲ್ಲಿನ ಆದೇಶ ಪುಟಗಳ ಧೃಢೀಕೃತ ನಕಲು ಒಟ್ಟು 66 ಪುಟಗಳನ್ನು ನಿಡಿ-398 ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ-ಶ್ರೀ **P.V.K.** ವಾದಿ ಪರ ವಕೀಲರಿಂದಃ-

ನಿಡಿ-393 ರ ಪ್ರಕಾರ 01.10.2019 ರಿಂದ 08.10.2019 ರವರೆಗೆ ನಮ್ಮ ತಾಯಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು ಅಂದರೆ ಸರಿ. ನಿಡಿ-393 ರ ಮೇಲ್ಭಾಗದಲ್ಲಿ ದಿನಾಂಕ, ರೋಗಿಯ ಹೆಸರು ಇತ್ಯಾದಿಯಾಗಿ ನಮೂದು ಇಲ್ಲ ಅಂದರೆ ಸಾಕ್ಷಿಯು ಪ್ರಮಾಣ ಪತ್ರದಲ್ಲಿ ನಮೂದು ಇದೆ ಅಂತಾ ನುಡಿಯುತ್ತಾರೆ. ನಿಡಿ-393 ದಾಖಲೆಯನ್ನು ನಾನು ನನ್ನ ವಿಚಾರಣೆ ಪ್ರಾರಂಭವಾದ ನಂತರ ಡಾ|| ಶ್ರೀ ಹರೀಶ್ ಪೂಜಾರಿ ಅವರ ಬಳಿ ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಅದಕ್ಕಿಂತ ಪೂರ್ವದಲ್ಲಿ ನನ್ನ ಅಣ್ಣ ಮತ್ತು ಅತ್ತಿಗೆಯನ್ನು ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಡಾ|| ಶ್ರೀ ಹರೀಶ್ ಪೂಜಾರಿ ಅವರು ನನ್ನ ಅಣ್ಣನಿಗೆ ಪರಿಚಯಸ್ತರು ಇರುತ್ತಾರೆ. 08.10.2019 ರಂದು ನಮ್ಮ ತಾಯಿಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವಾಗ 5 ದಿನಗಳ ವಿರಾಮದ ಅವಶ್ಯಕತೆ ಇದೆ ಅಂತಾ ನಮೂದು ಇದೆ ಅಂದರೆ ಸರಿ. 07-10-2019 ರ ಪೂರ್ವದಲ್ಲಿ ನಮ್ಮ ತಾಯಿ ಚಿಕಿತ್ಸೆಯನ್ನು ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ಅದಕ್ಕಿಂತ ಪೂರ್ವದಲ್ಲಿ ನಮ್ಮ ತಾಯಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೇಯೇ ವಿನಹ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ನಮ್ಮ ತಾಯಿ ದೈನಂದಿನ ಚಟುವಟಿಕೆಯನ್ನು ಮಾಡಿಕೊಂಡು ಇದ್ದಾರೆ ಅಂದರೆ ಸರಿ. ನಮ್ಮ ರೇಖಾ ಪರಾಂಜತೆ ಅಂದರೆ ಸರಿ. ನಾನು ಹಾಜರು ಪಡಿಸಿದ ಆಸ್ಪತ್ರೆಯ ದಾಖಲೆಗಳಲ್ಲಿ ರೇಖಾ ಭರತ್ ಕಾಳೆ ಅಂತಾ ನಮೂದು ಇದೆ ಅಂದರೆ ಸಾಕ್ಷಿಯು ಆ ರೀತಿಯಿಂದಲೂ ಕರೆಯುತ್ತಾರೆ ಅಂತಾ ನುಡಿಯುತ್ತಾರೆ. ನನ್ನ ಪಾಟೀ ಸವಾಲಿನ ನಂತರ ಪಾಟೀ ಸವಾಲಿನಲ್ಲಿ ನನ್ನ ಸಾಕ್ಷಿಯಲ್ಲಿನ ನ್ಯೂನತೆಗಳನ್ನು ಮುಚ್ಚಿ ಹಾಕಲು ನಿಡಿ-390 ರಿಂದ 397 ರವರೆಗೆ ದಾಖಲೆಗಳನ್ನು ಹಾಜರು ಪಡಿಸಿ ಅದಕ್ಕೆ ಅನುಗುಣವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. CC 24/2016 ಮುಕ್ತಾಯಗೊಂಡ ಬಗ್ಗೆ ಆದೇಶ

ಪುಟಗಳನ್ನು ಹಾಜರು ಪಡಿಸಿದ್ದೇನೆ. ನಿಡಿ-398 ದಾಖಲೆಗೂ ಮತ್ತು ದಾವೆಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

(ಶ್ರೀ. C.S.A. ವಕೀಲರು ಶ್ರೀ.P.V.K. ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.)

<u>ಮರುವಿಚಾರಣೆಃ-</u> ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ